SRUJANI ISSN: 2583-3510
Indian Journal of Innovative Research and Development (SIJIRD)
Volume-1 (01), March-April 2022, Pp. 25-28
Bi-Monthly, Peer-Reviewed, Open Access, Indexed Journal
srujanifoundation@gmail.com
editor@srujani.in
www.srujani.in

# ಮಾದಿಗ ಸಮುದಾಯದ ಕುಲ–ಕಸಬುಗಳು

**ಕವಿತಾ***
*ಸಂಶೋಧನಾ ವಿದ್ಯಾರ್ಥಿನಿ, ಸಮಾಜಶಾಸ್ತ್ರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

***Abstract:***
ಭಾರತ ದೇಶವು ಬಹು ಸಂಸ್ಕೃತಿಯ ದೇಶವಾಗಿದ್ದು, ವಿವಿಧ ಧರ್ಮ, ವಿವಿಧ ಜಾತಿ ಮತ್ತು ಜನಾಂಗಗಳು ಇಲ್ಲಿ ನೆಲೆಸಿವೆ. ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವಿಭಿನ್ನತೆಯನ್ನು ಹೊಂದಿರುವ ಭಾರತವು ಭೌಗೋಳಿಕವಾಗಿಯೂ ಕೂಡ ವೈವಿಧ್ಯತೆಯನ್ನು ಹೊಂದಿರುವ ರಾಷ್ಟ್ರವಾಗಿದೆ. ರಾಷ್ಟ್ರದಲ್ಲಿರುವ ಪ್ರತಿಯೊಂದು ಸಮುದಾಯದವರು ಕೂಡ ತಮ್ಮದೇಯಾದ ಆಚಾರ ವಿಚಾರ, ಸಾಮಾಜಿಕ–ಆರ್ಥಿಕ ವ್ಯವಸ್ಥೆಯನ್ನು ಹೊಂದಿದ್ದು, ಅವು ಒಂದು ಸಮುದಾಯದಿಂದ ಒಂದು ಸಮುದಾಯಕ್ಕೆ ವಿಭಿನ್ನತೆಯನ್ನು ಹಾಗೂ ಸಾಮ್ಯತೆಯನ್ನು ಹೊಂದಿವೆ. ಪ್ರಸ್ತುತ ಲೇಖನದಲ್ಲಿ ಭಾರತ ದೇಶದ ಮೂಲನಿವಾಸಿ ಸಮುದಾಯಗಳಲ್ಲಿ ಒಂದಾದ ಮಾದಿಗ ಸಮುದಾಯದವರ ಕುಲ–ಕಸಬನ್ನು ಕುರಿತು ಸಮಾಜಶಾಸ್ತ್ರ ದೃಷ್ಟಿಕೋನದಿಂದ ವಿಶ್ಲೇಷಣೆ ಮಾಡಲಾಗಿದೆ.

***Key Words:*** ಮಾದಿಗರು, ಮಾತಂಗ, ಕುಲ–ಕಸುಬು, ಅಸ್ಪೃಶ್ಯತೆ, ಹಲಗೆ, ಚರ್ಮ ಸಂಸ್ಕರಣೆ.

**ಪೀಠಿಕೆ**

ಆದಿಮ ಕಾಲದಿಂದಲೂ ಗುಂಪು ಗುಂಪಾಗಿ ಜೀವಿಸುತ್ತಿದ್ದ ಮಾನವನು ಕಾಲಾಂತರದಲ್ಲಿ ವೃತ್ತಿಗಳನ್ನು ಹಂಚಿಕೊಂಡು ಸಹಬಾಳ್ವೆ ಮಾಡತೊಡಗಿದನು. ಪ್ರಾರಂಭದಲ್ಲಿ ವ್ಯಕ್ತಿಯು ಯಾವುದೇ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರವನ್ನು ಹೊಂದಿದ್ದನು. ಕಾಲಾಂತರದಲ್ಲಿ ಹಂಚಿಕೆಯಾದ ವೃತ್ತಿಯನ್ನು ನಿರ್ಧಿಷ್ಟವಾದ ವ್ಯಕ್ತಿ/ಗುಂಪು ಮಾಡಬೇಕೆನ್ನುವ ನಿರ್ಬಂಧ ವಿಧಿಸಲಾಯಿತು. ಇಂತಹ ನಿರ್ಬಂಧದಿಂದ ಅಗಸರು, ಸವಿತ ಸಮಾಜದವರು, ಆಚಾರಿಗಳು, ಕುಂಬಾರರು, ಒಕ್ಕಲಿಗರು, ನೇಯ್ಗೆಯವರು, ವಿಶ್ವಕರ್ಮ ಸಮುದಾಯ ಹೀಗೆ ನೂರಾರು ಸಮುದಾಯಗಳು ವಿವಿಧ ವೃತ್ತಿಗಳನ್ನು ತಮ್ಮ ಕುಲ ಕಸುಬುಳನ್ನಾಗಿಸಿಕೊಂಡರು ಹಾಗೆಯೇ ಮಾದಿಗ ಸಮುದಾಯದವರು ಕೂಡ ತಮ್ಮದೇಯಾದ ಕುಲ–ಕಸುಬುಗಳಲ್ಲಿ ತೊಡಗಿಸಿಕೊಂಡರು. ಇವರು ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ನೆಲಸಿದ್ದಾರೆ. ಮಾದಿಗರನ್ನು ಮಾದರ, ಮಾತಂಗ, ಮಾತಂಗಿ ಮಕ್ಕಳು, ಮಾಂಗ್, ಆದಿದ್ರಾವಿಡ, ಆದಿಆಂಧ್ರ, ಆದಿಕರ್ನಾಟಕ, ಎಡಗೈ, ಡೋರ, ದಕ್ಕಲಿಗ, ಮೋಚಿ, ಮಚಿಗಾರ, ಅಂತ್ಯಜರು ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತದೆ. ಮಾದಿಗರು ತಮ್ಮನ್ನು ಮಾತಂಗಿ ಮಕ್ಕಳು, ಮಾತಂಗಿ ವಂಶಸ್ಥರು ಎಂಬುದಾಗಿ ಗುರುತಿಸಿಕೊಳ್ಳುತ್ತಾರೆ.

2011ನೇ ಜನಗಣತಿ ಪ್ರಕಾರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೂಡ ನೆಲೆಸಿದ್ದರೂ ಕೂಡ ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಮಾದಿಗರು ಹಿಂದಿನಿಂದ ಇಂದಿನವರೆಗೂ ಕೂಡ ಶೋಷಿತ ಸಮುದಾಯವಾಗಿದ್ದು, ಅಸ್ಪೃಶ್ಯತೆಯಿಂದ ಬಳಲುತ್ತಿದ್ದಾರೆ. ಇವರು ಊರ ಹೊರಗೆ ಇರಬೇಕಾಗಿತ್ತು. ಇವರನ್ನ ಊರರೊಳಗೆ ಬಿಟ್ಟುಕೊಳ್ಳುತ್ತಿರಲ್ಲಿಲ್ಲ. ಏಕೆಂದರೆ ಮಡಿಮೈಲಿಗೆ ಎಂದು ಅವರನ್ನು ದೂರುತ್ತಿದ್ದರು. ಇವರು ಎಲ್ಲರಂತೆ ಜೀವನ ನಡೆಸುತ್ತಿರಲಿಲ್ಲ. ಇವರ ಜೀವನ ಶೈಲಿಯೇ ಬೇರೆಯಾಗಿತ್ತು. ಕಿತ್ತು ತಿನ್ನುವ ಬಡತನ, ಆರ್ಥಿಕ ಪರಿಸ್ಥಿತಿಯಿಂದ ಬಹಳಷ್ಟು ಅಬಲರಾಗಿದ್ದರು. ಸ್ಥಿರವಾಗಿ ವಾಸಿಸಲು ಕೂಡ ಇವರಿಗೆ ಸೂರು ಇರಲಿಲ್ಲ. ಕುಡಿಯುವ ನೀರಿಗೆ ಸಹ ಕಷ್ಟ ನೋವುಗಳನ್ನ ಅನುಭವಿಸಿದ್ದರು. ಇಂದಿಗೂ ಕೂಡ ನಗರ–ಹಳ್ಳಿಗಳೆಂಬ ಬೇಧವಿಲ್ಲದೆ ಕೆಳಮಟ್ಟದಲ್ಲಿ ನೋಡಲಾಗುತ್ತದೆ. ದೇವಾಲಯಗಳಲ್ಲಿಯೂ ಕೂಡ ಇವರಿಗೆ ಅವಕಾಶಗಳು

*Please cite this article as:* ಕವಿತಾ. (2022). ಮಾದಿಗ ಸಮುದಾಯದ ಕುಲ–ಕಸಬುಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(1), 25–28.

ದೊರಕದಿರುವುದನ್ನು ಇಂದಿಗೂ ಕಾಣಬಹುದಾಗಿದೆ. ಇದಕ್ಕೆಲ್ಲ ನಮ್ಮ ಭಾರತೀಯ ಸಮಾಜದಲ್ಲಿರುವ ಅನಿಷ್ಟ ಜಾತಿ ಪದ್ಧತಿಯೇ ಪ್ರಮುಖ ಕಾರಣವಾಗಿದೆ.

**ಅಧ್ಯಯನದ ಉದ್ದೇಶಗಳು**

- ಮಾದಿಗ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದು.
- ಮಾದಿಗ ಸಮುದಾಯದ ಕುಲ–ಕಸುಬುಗಳನ್ನು ಅಧ್ಯಯನ ಮಾಡುವುದು.
- ಮಾದಿಗರ ಅಭಿವೃದ್ಧಿಗೆ ಸಲಹೆಗಳನ್ನು ನೀಡುವುದು.

**ಅಧ್ಯಯನದ ಮಹತ್ವ:**

- ಮಾದಿಗರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ತಿಳಿಸುತ್ತದೆ.
- ಮಾದಿಗ ಸಮುದಾಯದಲ್ಲಾಗಿರುವ ವೃತ್ತಿ ಬದಲಾವಣೆಗಳ ಬಗ್ಗೆ ಮಾಹಿತಿ ಒದಗಿಸುವುದರ ಜೊತೆಗ ಸಮುದಾಯದ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲು ಅನುಕೂಲವಾಗುತ್ತದೆ.

**ಅಧ್ಯಯನ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ, ಅವಲೋಕನ ಮತ್ತು ಕೇಂದ್ರೀಕೃತ ಗುಂಪು ಚರ್ಚೆ ವಿಧಾನಗಳ ಮೂಲಕ ಹಾಗೂ ಮಾಧ್ಯಮಿಕ ಮಾಹಿತಿಯನ್ನು ಗ್ರಂಥಗಳು, ಸಂಶೋಧನಾ ಪ್ರಬಂಧಗಳು, ನಿಯತಕಾಲಿಕೆಗಳು, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ವರದಿಗಳು, ಅಂತರ್ಜಾಲ ಮುಂತಾದ ಮೂಲಗಳಿಂದ ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**ಅಧ್ಯಯನ ಕ್ಷೇತ್ರ ಮತ್ತು ಮಾದರಿ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ 50 ಕುಟುಂಬಗಳನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನ ಬಳಸಿಕೊಂಡು ಆಯ್ಕೆ ಮಾಡಿಕೊಳ್ಳಲಾಗಿದೆ.

**ಮಾದಿಗರ ಕುಲ–ಕಸಬುಗಳು**

ಚರ್ಮ ಸಂಸ್ಕರಣೆ ಮತ್ತು ಚರ್ಮ ಉತ್ಪನ್ನಗಳನ್ನು ಸಂಗ್ರಹಿಸುವುದು ಮಾದಿಗ ಸಮುದಾಯದ ಕುಲ–ಕಸುವಾಗಿದೆ. ಈ ವೃತ್ತಿಯು ಇವರಿಗೆ ವಂಶಪಾರಂಪರ್ಯವಾಗಿ ಬಂದಿದ್ದು, ಇತ್ತೀಚಿನವರೆಗೂ ಕೂಡ ಇವರು ಈ ವೃತ್ತಿಯನ್ನು ಮುಂದುವರೆಸುತ್ತಿರವುದನ್ನು ಕಾಣಬಹುದಾಗಿದೆ. ಮೂಲತಃ ಮಾದಿಗರು ಮಾದಿಗರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅತ್ಯಂತ ಹಿಂದುಳಿದಿರುವ ಸಮುದಾಯವಾಗಿದ್ದು ಜೀತವನ್ನೇ ಮೊದಲಿಗೆ ತಮ್ಮ ಕುಲಕಸುಬಿನಂತೆ ಮಾಡುತ್ತಿದ್ದರು. ಹಿಂದಿನ ಕಾಲದಲ್ಲಿ ಒಂದೊತ್ತಿನ ಊಟವು ಕೂಡ ಸಿಗದಂಂತಹ ಪರಿಸ್ಥಿತಿಯಿದ್ದರಿಂದ ಒಂದೊತ್ತಿನ ಊಟಕ್ಕಾಗಿಯೇ ಊರಿನ ಮೇಲ್ವರ್ಗದವರ ಹೊಲ ಮನೆಗಳಲ್ಲಿ ಜೀತದಾಳುಗಳಾಗಿ ದುಡಿಯುತ್ತಿದ್ದರು. ದುಡಿಸಿಕೊಳ್ಳುತ್ತಿದ್ದ ಮೇಲ್ವರ್ಗದ ಜನರು ಇವರನ್ನು ಅತ್ಯಂತ ನಿಕೃಷ್ಟವಾಗಿ ನೋಡುತ್ತಿದ್ದದ್ದು ಮಾತ್ರವಲ್ಲದೇ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಲ್ಲೆಯನ್ನು ಕೂಡ ಮಾಡುತ್ತಿದ್ದರು. ಸಾಮಾಜೀಕರಣಗೊಂಡಂತೆ ತಮಗಾಗುತ್ತಿದ್ದ ಅವಮಾನವನ್ನು ಸಹಿಸಲಾಗದೇ ಇವರು ತಮ್ಮದೆಯಾದ ವೃತ್ತಿಯನ್ನು ಕಂಡುಕೊಂಡರು.

**ಚರ್ಮ ಉತ್ಪನ್ನ ತಯಾರಿಕೆ**

ಹಿಂದಿನ ಕಾಲದಿಂದಲೂ ಮಾದಿಗ ಸಮುದಾಯದವರು ಸತ್ತ ಪ್ರಾಣಿಗಳ ಚರ್ಮ ಸುಲಿದು, ಹದ ಮಾಡಿ ವಿವಿಧ ಉತ್ಪನ್ನಗಳನ್ನು ಸಿದ್ಧಪಡಿಸುತ್ತಿದ್ದರು. ಎಮ್ಮೆಯ ತೊಗಲಿನಿಂದ ಚಪ್ಪಲಿ, ಎತ್ತು–ಹಸುವಿನ ತೊಗಲಿನಿಂದ ಜತಿಗೆ, ಬಾರು, ಬಾರುಕೋಲು, ಹೆಜ್ಜೆಸರ, ಕುರಿ ಹಾಗೂ ಸಣ್ಣ ಕೋಣದ ಚರ್ಮದಿಂದ ಹಲಗೆಯನ್ನು ಮಾಡಿ ತದನಂತರ ಉಳಿದ ವಸ್ತುಗಳನ್ನು ತೊಗಲು ಸ್ವಲ್ಪ ಹಸಿ ಇರುವಾಗ ದುಮ್ಮಡಿ, ಹಲಿಗೆಯನ್ನು ತಯಾರಿಸುತ್ತಿದರು. ಇದಲ್ಲದೇ ಕೃಷಿಗೆ ಅವಶ್ಯವಿರುವ ಉಪಕರಣಗಳನ್ನು ನಿರ್ಮಿಸುವುದರಲ್ಲಿ ನಿಪುಣರಾಗಿದ್ದರು.

**ಚರ್ಮ ಹದಗೊಳಿಸುವುದು**

ಚರ್ಮ ಹದಮಾಡುವುದಕ್ಕೆ ಕರಿ/ಕರೆ ಕಟ್ಟುವುದು ಎನ್ನುತ್ತಾರೆ. ಸತ್ತ ದನದ ಚರ್ಮವನ್ನು ತಂದು ಅದಕ್ಕೆ ಎಣ್ಣೆ, ಅರಿಸಿಣ, ಉಪ್ಪಿನ ಮಿಶ್ರಣವನ್ನು ಹಚ್ಚಿ ನಾಲ್ಕು ದಿಕ್ಕಿಗೂ ಸಣ್ಣ ಕಟ್ಟಿಗೆಯ ಗೂಟಗಳನ್ನು ಬಡಿಯುವರು. ಗೂಟಗಳಿಗೆ ಚರ್ಮವನ್ನು ಮುದುಡದಂತೆ ಬಿಗಿಯಾಗಿ ಕಟ್ಟಿ ಒಣಸಿಸುವರು, ಚರ್ಮ ಒಣಗಿದನಂತರ ಆ ಚರ್ಮವನ್ನು ಕರಿಬಾನಿಯ (ಗಲ್ಲೆಬಾನಿ) ನೀರಿನಲ್ಲಿ ನೆನೆಹಾಕುವರು. ಚರ್ಮವು ಹದವಾಗಲು ಕರಿಬಾನಿಯ ನೀರಿನಲ್ಲಿ ನೆನೆಹಾಕುವರು.



ಚಿತ್ರ 1: ಕರಿಬಾನಿ

ಕರಿಬಾನಿಯು ಮಾದಿಗರಿಗೆ ತುಂಬ ಮಹತ್ವವಾದುದು. ಅದನ್ನು ಪೂಜನೀಯವಾಗಿ ಕಾಣುವರು. ಚರ್ಮ ಕರಿಕಟ್ಟಲು ನೀರಿನಲ್ಲಿ ನೆನೆಹಾಕುವ ಬಾನಿಯೇ ಕರಿಬಾನಿ. ಇದನ್ನು ನೆಲದೊಳಗೆ ಮೂರಡಿ ಆಳಕ್ಕೆ ನಾಲ್ಕು ಚದುರಡಿ ಅಗಲಕ್ಕೆ ಕುಣಿ ತೆಗಿಯುವುರು. ಅದರ ಮೇಲೆ ಸುತ್ತಲೂ ಕುಂಬಿ ಕಟ್ಟುವರು. ಸಾಮಾನ್ಯವಾಗಿ ದೇವರ ಗುಡಿಯ ಮುಂಭಾಗದಲ್ಲಿ ಇದಿರುತ್ತದೆ. ಪೂರ್ವಾಭಿಮುಖದಲ್ಲಿ ಇದನ್ನು ಪೂಜಿಸುವರು. ಕರಿಬಾನಿಯ ನೀರು ಸರ್ವರೋಗ ನಿವಾರಕ ಎಂಬುವುದು ಮಾದಿಗ ಸಮುದಾಯದವರ ನಂಬಿಕೆ. ಈ ಕುಲ ಕಸಬು ಇವರಲ್ಲಿ ಹೆಚ್ಚು ಕಂಡುಬರುತ್ತದೆಯಾದರೂ ಬೇರೆ ಬೇರೆ ವೃತ್ತಿಗಳಲ್ಲಿ ತಮ್ಮನ್ನು

ತಾವು ತೊಡಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಒಕ್ಕಲುತನ, ವ್ಯಾಪಾರ, ಕೂಲಿ ಮುಂತಾದ ಕೆಲಸಗಳಲ್ಲಿ ಮಾದಿಗರು ತೊಡಗಿರುವುದು ಕಂಡುಬರುತ್ತತೆ.

**ಸಂಭಾವನೆ ಇಲ್ಲದ ಸೇವೆ (ಬಿಟ್ಟಿ ಸೇವೆ)**

ಮಾದಿಗ ಸಮುದಾಯದ ಕುಲ–ಕಸಬುಗಳಲ್ಲಿ ಕಂಡುಬರುವ ಮತ್ತೊಂದು ಕಸಬು ಎಂದರೇ ಅದು ಬಿಟ್ಟಿಸೇವೆ. ಅಥವ ಬಿಟ್ಟಿ ಚಾಕರಿ. ತಾವು ವಾಸಮಾಡಿದ ಸ್ಥಳದಲ್ಲಿ ಅಥವಾ ಊರಿನಲ್ಲಿ ಮೇಲವರ್ಗದವರ ಮನೆಯಲ್ಲಿ ದಿನಪೂರ್ತಿ ಚಾಕರಿಯನ್ನು ಮಾಡಿ ಹಾಗೂ ಬೆಳಗಿನ ಜಾವ ಅವರ ಮನೆಮುಂದೆ ದನದ ಕೊಟ್ಟಿಗೆಯನ್ನು ಶೂಚಿಗೊಳಿಸಿ ತದನಂತರ ಮನೆಯ ಅಂಗಳವನ್ನು ಸಾರಿಸಿ ರಂಗೋಲಿಯನ್ನು ಬಿಡಿಸಿ ನಂತರ ಇವರು ಯಾವುದೇ ಪ್ರತಿಫಲವನ್ನು ಬಯಸದೆ ಒಂದು ಹೊತ್ತಿನ ಊಟಕ್ಕಾಗಿ ಬಿಟ್ಟಿಯಾಗಿ ಚಾಕರಿ ಮಾಡುತ್ತಿದ್ದರು. ಬಿಟ್ಟಿ ಚಾಕರಿಗೆ ಹೆಸರೇ ಸೂಚಿಸುಂತೆ ಯಾವುದೇ ಕೂಲಿ ದೊರೆಯುತ್ತಿರಲಿಲ್ಲ. ಅವರನ್ನು ಬಲವಂತವಾಗಿಯಾದರೂ ಬಿಟ್ಟಿಯಾಗಿ ದುಡಿಸಿಕೊಳ್ಳುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಇಂತಹ ಅನಿಷ್ಠ ವೃತ್ತಿ ಬಹುತೇಕ ಇಲ್ಲವಾಗಿದೆ.

**ಶುಚಿಗೊಳಿಸುವುದು**

ಮಾದಿಗ ಸಮುದಾಯದ ಹಿರಿಯ ಮುಖಂಡರು ಹೇಳುವಂತೆ ಊರಿನ ಸ್ವಚ್ಛತೆಯನ್ನು ಕಾಪಾಡುವುದುಗೊಸ್ಕರ ಮತ್ತು ತಮ್ಮ ಮನೆಯ ವಾತವರಣವನ್ನು ಶುಚಿಗೊಳಿಸುವುದಗೊಸ್ಕರ ಮಾದಿಗರನ್ನು ಕರೆಸಿಕೊಳುತ್ತಿದ್ಧರು. ಇವರಿಗೂ ಕೂಡ ಹೆಚ್ಚು ಬಡತನವಿರುವುದರಿಂದ ಈ ವೃತ್ತಿಯನ್ನು ಕೈಗೊಳ್ಳುವುದು ಅನಿವಾರ್ಯವಾಗಿತ್ತು. ಮನುಷ್ಯನ ಮಲವನ್ನು ಮನುಷ್ಯನೇ ಕೈಯಲ್ಲಿ ಬಾಚುವ, ತಲೆಯ ಮೇಲೆ ಹೊರುವ ಅನಿಷ್ಠ ಪದ್ಧತಿ ಇಂದಿಗೂ ಅನೇಕ ಭಾಗಗಳಲ್ಲಿ ಜೀವಂತವಾಗಿ ಉಳಿದಿದೆ. ಪೌರ ಕಾರ್ಮಿಕರಲ್ಲದೆ ಬೀದರ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಮೇತರ ಎಂಬ ಹೆಸರಿನಿಂದ ಕರೆಯುವ ಮಲ ಹೊರುವ ಜನಾಂಗ ಕೂಡ ಮಾದಿಗ ಸಮಾಜದ ಸಮುದಾಯವೇ ಆಗಿದೆ. ಬೇಜವಾಡ ವಿಲ್ಸನ್ ಅವರ ಪ್ರಕಾರ ಕಳೆದ ಮೂರು ವರ್ಷಗಳ (2014 ರಿಂದ 2017 ನಡುವೆ) ಅವಧಿಯಲ್ಲಿ 1370 ಕಾರ್ಮಿಕರು ಭಾರತ ದೇಶದ ಕಸದ ತೊಟ್ಟಿಗಳಲ್ಲಿ, ಚರಂಡಿಗಳಲ್ಲಿ ಕೆಲಸ ನಿರ್ವಹಿಸುತ್ತಾ ಪ್ರಾಣ ತೆತ್ತಿದ್ದಾರೆ.

**ಹಲಗೆ ಬಾರಿಸುವುದು**

ಮಾದಿಗ ಸಮುದಾಯದಲ್ಲಿ ಹಲಗೆ ಬಾರಿಸುವುದು ಮೂಲ ವೃತ್ತಿಗಳಲ್ಲಿ ಪ್ರಮುಖವಾದ ವೃತ್ತಿಯಾಗಿದೆ. ಬೀದರ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಾದ ಗುಲಬರ್ಗಾ, ರಾಯಚೂರು, ಕೊಪ್ಪಳ, ಯಾದಗಿರಿ ಬಳ್ಳಾರಿ ಹಾಗೂ ಕರ್ನಾಟಕದ ಹೆಚ್ಚು ಭಾಗಗಳಲ್ಲಿ ಹಲಗೆ ಬಾರಿಸುವುದು ಮತ್ತು ಹಲಗೆಯನ್ನು ತಯಾರಿಸುವುದು ಇವರ ಮೂಲ ಕಸುಬಾಗಿದೆ. ಸಾಮಾನ್ಯವಾಗಿ ಹಬ್ಬ ಹರಿದಿನ, ಜಾತ್ರೆ, ಹುಟ್ಟು ಸಾವು ಮದುವೆ, ಸೋಬಾನ, ಮೆರವಣಿಗೆ ಮುಂತಾದ ಸಂದರ್ಭದಲ್ಲಿ ಹಲಗೆಯನ್ನು ಭಾರಿಸುತ್ತಾರೆ. ಇದಲ್ಲದೇ ವಿವಿಧ ಸುದ್ದಿಗಳನ್ನು ಗ್ರಾಮದ ಜನರಿಗೆ ಡಂಗೂರ ಸಾರುವುದರ ಮೂಲಕ ತಿಳಿಸಲು ಹಲಗೆ ಬಳಸುವುದನ್ನು ಇಂದಿಗೂ ಕಾಣಬಹುದಾಗಿದೆ.

**ಬಾಜಿ ಬಾರಿಸುವುದು**

ಬಾಜಿಯನ್ನು ಬಾರಿಸುವುದು ಕೂಡ ಮಾದಿಗರ ಪ್ರಮುಖ ಕುಲ–ಕಸುಬಗಳಲ್ಲಿ ಒಂದಾಗಿದೆ. ಮನುಷ್ಯನ ಜನನದಿಂದ ಮರಣದವರೆಗೆ ನಡೆಯುವ ಶುಭ–ಅಶುಭ ಕಾರ್ಯಗಳಲ್ಲಿ ಬಾಜಿ ಬಾರಿಸುವುದು ಇವರ ಕಾಯಕವಾಗಿದೆ. ಶಹನಾಯಿನ್ನು ನುಡಿಸುವುದು ಇವರ ಪ್ರವೃತ್ತಿಯಾಗಿದೆ.

**ಕೃಷಿ/ವ್ಯವಸಾಯ**

ಮಾದಿಗರು ಮೂಲತಃ ಕೃಷಿಕರು. ಉಳುಮೆ, ಬೀಜ ಬಿತ್ತನೆ, ಕೂಯ್ಲು ಮುಂತಾದ ವೃತ್ತಿಗಳನ್ನು ಮೇಲ್ವರ್ಗದವರು ಮಾಡಿಸಿಕೊಳ್ಳುತ್ತಿದ್ದರು. ಸಲಕರಣೆಗಳ ಸಹಾಯವಿಲ್ಲದೆ ಬರಿಗೈಯಿಂದಲೇ ಹೊಲವನ್ನು ಉಳುವುದು ಮತ್ತು ಬೀಜಗಳನ್ನು ಬಿತ್ತನೆಯನ್ನು ಮಾದಿಗರಿಂದ ಮಾಡಿಸಿಕೊಳ್ಳುತ್ತಿದರು. ಇವರು ಭೂಮಾಲಿಕನ ಹೊಲದಲ್ಲಿ ಬೀಜ ಬಿತ್ತಿದ ದಿವಸದಿಂದ ಹಿಡಿದು ಫಸಲು ಬರುವವರೆಗೂ ಕೂಡ ಎಲ್ಲ ಕೆಲಸಗಳನ್ನು ಮಾಡಬೇಕಿತ್ತು. ಕೆಲಸ ಅತಿಯಾದಾಗ ಮತ್ತು ಸಮಯದ ಅಭಾವದಲ್ಲಿ ಕೂಲಿಕಾರ್ಮಿಕರಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಭೂ ಮಾಲಿಕರ ಅಥವ ಮೇಲ್ವರ್ಗದವರ ಹೊಲಗಳಲ್ಲಿ ಬೆಳೆದ ಜೋಳ, ಸಜ್ಜೆ, ಭತ, ತೊಗರಿ, ನವಣೆ, ಕುಸಬಿ ಬೆಳೆ ಬಂದಾಗ ಪಕ್ಷಿಗಳು ತಿನ್ನಲು ಬರುವುದು ಸಹಜ. ಇದರಿಂದಾಗಿ ಭೂಮಾಲಿಕರು ಬೆಳೆ ನಾಶವಾಗುವುದು ಎಂದು ತಿಳಿದು ಮಾದಿಗರಿಗೆ ಪಕ್ಷಿಗಳನ್ನು ಓಡಿಸಲು ಹೇಳುತಿದ್ದರು. “ಮಾದಿಗರು ಕವಣಿಯನ್ನು ಹಿಡಿದುಕೊಂಡು ಹಾಗೂ ಚಿಕ್ಕ ಚಿಕ್ಕ ಕಲ್ಲುಗಳನ್ನು ತೆಗೆದುಕೊಂಡು ಪಕ್ಷಿಯನ್ನು ಓಡಿಸಲು ಹೊಲಕ್ಕೆ ಹೋಗುತ್ತಿದ್ದರು” ಇವರು ನಸುಕಿನಲ್ಲಿ ಎದ್ದು ಹಾಗೂ ಬೆಳಿಗಿನ ಜಾವ ಸಂದರ್ಭದಲ್ಲಿ ಪಕ್ಷಿಗಳು ಹೊಲಕ್ಕೆ ಬರುವಂತದ್ದು ಎಂದು ತಿಳಿದು ಅದಕ್ಕಾಗಿ ಈ ಒಂದು ಸಮುದಾಯವು ಹೊಲವನ್ನು ಕಾಯಲು ಮತ್ತು ಅವುಗಳನ್ನು ಓಡಿಸಲು ಸಲುವಾಗಿ ಭೂಮಾಲಿಕರು ಅವರನ್ನು ಹೊಲಕ್ಕೆ ಕಳಿಹಿಸುತ್ತಿದ್ದರು.

**ಕಣ ಮಾಡುವುದು**

ಮಾದಿಗರು ಮೂಲತಃ ಕೃಷಿಕರು. ಕೃಷಿ ಚಟುವಟಿಕೆಗಳಲ್ಲಿ ಇವರು ಅತ್ಯಂತ ನಿಪುಣರು. ಹಾಗಾಗಿ ಇವರನ್ನು ವಿವಿಧ ರೀತಿಯ ಕೃಷಿ ಚಟುವಟಿಕೆಗಳಲ್ಲಿ ಮೇಲ್ವರ್ಗದವರು ಬಳಸಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಯಾವುದೇ ಬೆಳೆ ಬಂದಾಗ ಅದನ್ನು ಒಕ್ಕಣೆ ಮಾಡಲು ಕಣ (ಕೊಠಾರ) ದ ಅವಶ್ಯಕತೆಯಿರುತ್ತದೆ. ಇಂತಹ ಕಣಗಳನ್ನು ಕೂಡ ಮಾದಿಗ ಸಮುದಾಯದವರಿಂದಲೇ ಮಾಡಿಸಿಕೊಳ್ಳುತ್ತಾರೆ. ಈ

ವೃತ್ತಿಯೇನೂ ಮಾದಿಗೆ ಮೀಸಲಲ್ಲ. ಆದರೆ ಕಡಿಮೆ ಕೂಲಿ ಮತ್ತು ಹೆಚ್ಚಿನ ಅವಧಿಯವರಿಗೆ ದುಡಿಸಿಕೊಳ್ಳಲು ಈ ಸಮುದಾಯವನ್ನು ಹೆಚ್ಚು ಕೃಷಿ ಚಟುವಟಿಕೆಗಳಲ್ಲಿ ಬಳಸಿಕೊಳ್ಳುತ್ತಿದ್ದರು .

**ಕಾಳು (ದವಸ ಧಾನ್ಯ) ಆರಿಸುವುದು**

ಕೃಷಿಗೆ ಸಂಬಂಧಿಸಿದಂತೆ ಮತ್ತೊಂದು ಕಸಬು ಎಂದರೆ ಅದು ಕಾಳು ಆರಿಸುವುದು ಎಂಬುವುದನ್ನು ತಿಳಿಯಬಹುದು. ಭೂಮಾಲೀಕರ ಹೊಲಗಳಲ್ಲಿ ಹಾಗೂ ಗೌಡರ ಹೊಲಗಳಲ್ಲಿ ಮಾದಿಗರು 'ಕಾಳುಗಳು' ಎಂದರೆ ದವಸ ಧನ್ಯಗಳನ್ನು ಆಯ್ದುಕೊಂಡು ಬರುವ ಪದ್ಧತಿಗೆ ಕಾಳು ಹಾರಿಸುವುದು ಎಂದು ಕರಿಯುತ್ತೇವೆ. ಜೋಳ, ಸಜ್ಜೆ, ಗೋಧಿ, ತೊಗರಿ, ಭತ, ಹಾಗೂ ದ್ವಿದಳ ಧಾನ್ಯಗಳು ಕೊಯ್ಯಲು ಬಂದಾಗ ನೆಲಕ್ಕೆ ಬಿದ್ದಿರುವ ತೆನೆಗಳು ಅಥವಾ ಕಾಳುಗಳನ್ನು ಆರಿಸುವುದು ಹೀಗೆ ಆಯ್ದುಕೊಂಡು ಬಂದಂತಹ ಕಾಳುಗಳನ್ನು ಹೊಲದ ಯಜಮಾನನಿಗೆ ಅರ್ಧಭಾಗ ಮತ್ತು ಉಳಿದ ಭಾಗವನ್ನು ತಾನು ತೆಗೆದು ಕೊಳ್ಳುತ್ತಿದ್ದನು ಈ ವೃತ್ತಿಯನ್ನು ಮಾದಿಗರು ಕಾಳು ಆರಿಸುವುದು ಎಂದು ಕರೆಯುತ್ತಾರೆ.

**ಮೂಲ ವೃತ್ತಿಗಳಲ್ಲಿ ಬದಲಾವಣೆ**

ಮೇಲೆ ಚರ್ಚಿಸಿದಂತೆ ಮಾದಿಗ ಸಮುದಾಯದ ಪ್ರಮುಖ ಕುಲಕಸಬೆಂದರೆ ಚರ್ಮವನ್ನು ಸಂಸ್ಕರಿಸುವುದು ಮತ್ತು ಸಂಸ್ಕರಿಸಿದ ಚರ್ಮದಿಂದ ಪಾದರಕ್ಷೆಗಳು, ಹಲಗೆ, ತಮಟೆ, ಡೊಳ್ಳು, ಮೀಣಿ, ಬಾರಕೋಲು ಮುಂತಾದ ವಸ್ತುಗಳನ್ನು ತಯಾರಿಸುವುದಾಗಿತ್ತು. ಆದರೆ ಬದಲಾದ ಕಾಲಘಟ್ಟದಲ್ಲಿ ಇವರು ಉತ್ಪಾದಿಸುತ್ತಿದ್ದ ವಸ್ತುಗಳ ಬದಲಿಗೆ ಪರ್ಯಾಯ ವಸ್ತುಗಳು ಮಾರುಕಟ್ಟೆಗಳಲ್ಲಿ ಸಿಗುಂತಾಗಿ ಬೇಡಿಕೆ ಕಡಿಮೆಯಾಯಿತು ಅಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಸಮುದಾಯಗಳ ಅಭಿವೃದ್ಧಿಗೆ ಸಂವಿಧಾನಾತ್ಮಕವಾಗಿ ಹಲವರು ಯೋಜನೆಗಳನ್ನು ರೂಪಿಸಿದ್ದರ ಫಲವಾಗಿ, ವಿದ್ಯಾವಂತರ ಪ್ರಮಾಣ ಅಲ್ಪ-ಸ್ವಲ್ಪ ಹೆಚ್ಚಿದ್ದರ ಪರಿಣಾಮವಾಗಿ ಇಂದಿನ ಯುವಕರು ಕೂಡ ತಮ್ಮ ಮೂಲವೃತ್ತಿಯನ್ನು ಮುಂದುವರೆಸಲು ಇಷ್ಟಪಡದ ಕಾರಣ ಅವರ ಮೂಲ ವೃತ್ತಿಯಲ್ಲಿ ಬದಲಾವಣೆಯಾಗಿದೆ. ಬೆರಳೆಣಿಕೆ ಕುಟುಂಬಗಳು ಮಾತ್ರ ತಮ್ಮ ಮೂಲ ವೃತ್ತಿಯನ್ನು ಮುಂದುವರೆಸುತ್ತಿದ್ದು, ಹೆಚ್ಚಿನ ಕುಟುಂಬಗಳು ಕೃಷಿ ಮತ್ತು ಕೃಷಿ ಕೂಲಿಯನ್ನು ತಮ್ಮ ಜೀವನೋಪಾಯಕ್ಕೆ ಅವಲಂಬಿಸಿಕೊಂಡಿದ್ದಾರೆ.

**ಉಪಸಂಹಾರ**

ಒಟ್ಟಾರೆ ಹೇಳವುದಾದರೆ ಮಾದಿಗ ಸಮುದಾಯದವರು ಇಂದಿನ ದಿನಗಳಲ್ಲಿ ತಮ್ಮ ಕುಲಕಸುಬಿನಿಂದ ವಿಮುಖರಾಗಿದ್ದರೂ ಕೂಡ ಅವರ ಸಾಮಾಜಿಕ ಮತ್ತು ಆರ್ಥಿಕ ಪರಸ್ಥಿತಿ ಬದಲಾಗಿಲ್ಲ. ಇಂದಿಗೂ ಕೂಡ ಅಸ್ಪೃಶ್ಯತೆ, ಬಡತನ, ನಿರುದ್ಯೋಗ, ಹಸಿವು, ಅನಕ್ಷರತೆ, ಇವರನ್ನು ಕಾಡುತ್ತಿದೆ. ಸಂವಿಧಾನ ನಿರ್ಮಾಪಕರಾದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಕನಸು ಕನಸಾಗಿಯೇ ಉಳಿದಿದೆ. ಸರ್ಕಾರ ಯಾವುದೇ ಸವಲತ್ತುಗಳನ್ನು ನೀಡಿದರೂ ಕೂಡ ಅವು ಪೂರ್ಣ ಪ್ರಮಾಣದಲ್ಲಿ ತಲುಪದ ಕಾರಣ ಸಮಾಜದ ಮುಖ್ಯವಾಹಿನಿಗೆ ಬರುವಲ್ಲಿ ಹೆಣಗಾಡುತ್ತಿದ್ದಾರೆ. ಹಾಗಾಗಿ ಸರ್ಕಾರವು ಇವರ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ನೀಡುವುದರ ಜೊತೆಗೆ ಆ ಯೋಜನೆಗಳ ಪ್ರಯೋಜನ ಸಮುದಾಯಕ್ಕೆ ನೇರವಾಗಿ ತಲುಪುವಂತೆ ಖಚಿತಪಡಿಸಬೇಕಿದೆ. ಅಲ್ಲದೇ ಈಗಿರುವ ಯೋಜನೆಗಳ ಬಗ್ಗೆ ಅರಿವು ಮೂಡಿಸಿ ಅವುಗಳನ್ನು ಸದ್ಬಳಕೆ ಮಾಡಿಕೊಂಡು ಎಲ್ಲರಂತೆ ಸಮಾಜದಲ್ಲಿ ಅವರನ್ನು ಅಭಿವೃದ್ಧಿಗೊಳಿಸುವುದು ಅಗತ್ಯವಾಗಿದೆ. ಸರ್ಕಾರ ಮತ್ತು ಕೆಲವು ಸರ್ಕಾರೇತರ ಸಂಸ್ಥೆಗಳ ಪ್ರಯತ್ನದಿಂದ ಸಮಾಜದ ಮುಖ್ಯವಾಹಿನಿಯೆಡೆಗೆ ಮುಖ ಮಾಡುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಗೊಳಸಂಗಿ, ಅರ್ಜುನ. (2000). *ದಲಿತರ ಬದುಕು ಮತ್ತು ಸಂಸ್ಕೃತಿ: ಜನಪದೀಯ ಅಧ್ಯಯನ.* ವಿಮೋಚನಾ ಪ್ರಕಾಶನ.
- ಹಿರೇಮಠ, ಎಸ್. ಎಸ್. (2001). ದಲಿತ ಸಂಸ್ಕೃತಿ. ಗದಗ ಆಫ್‌ಸೆಟ್ ಪ್ರಿಂಟರ್ಸ್,
- ಕೊಟಗಾನಹಳ್ಳಿ ರಾಮಯ್ಯ. (1993). *ಸಿಂದ್ ಮಾದಿಗರ ಸಂಸ್ಕೃತಿ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ರಾಜಕುಮರ್. (2012) ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು. ಜೈ ಭೀಮ್ ಪ್ರಕಾಶನ.
- ರಾಜೇಂದ್ರ ಕೊಡಂಬಲಕರ, ಕೆ. (2017). *ಬೀದರ ಜಿಲ್ಲೆಯ ಮಾದಿಗ ಜನಾಂಗದ ಒಂದು ಸಾಂಸ್ಕೃತಿಕ ಅಧ್ಯಯನ.* ಅಪ್ರಟಿತ ಪಿಎಚ್.ಡಿ ಪೌಢ ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ.
- ಸುಜ್ಞಾನಮೂರ್ತಿ ಬಿ. *ದಲಿತ ರಾಜಕೀಯ : ಒಂದು ಸಚಿತ್ರ ದರ್ಶನ.* ಲಡಾಯಿ ಪ್ರಕಾಶನ.